16

# ಮನುಷ್ಯನು ತಪ್ಪಿ ಹೋದದ್ದಕ್ಕೆ ದೇವರು ಚಿಂತಿಸುವನೋ?

"ನಾನು, ಕರ್ತನು, ಮಾರ್ಪಡುವದಿಲ್ಲ" (ಮಲಾಕಿ 3:6). ದೇವರು ಎಂದೂ ಮಾರ್ಪಡುವದಿಲ್ಲವಾದ್ದರಿಂದ, ಮನುಷ್ಯನು ತಪ್ಪಿಹೋದದಕ್ಕೆ ದೇವರು ಚಿಂತಿಸುತ್ತಾನೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಲಿಕ್ಕೆ ಒಬ್ಬನು ಹಿಂದಿನ ಕಾಲದಕಡೆಗೆ ಮಾತ್ರವೇ ನೋಡಬೇಕಾಗುತ್ತದೆ. ಹಿಂದೆ ತನ್ನ ಚಿಂತನೆಯನ್ನು ಸ್ಪಷ್ಟ ವಾಗಿ ತೋರಿಸಿದ್ದು ಇಂದು ಬೇರೆಯಾಗಿರಲಾರದು. ಯಾಕಂದರೆ ಆತನು "ನಿನ್ನೆ ಇದ್ದಹಾಗೆ ಈಹೊತ್ತು ಇದ್ದಾನೆ, ನಿರಂತರವೂ ಹಾಗೆಯೇ ಇರುವನು" (ಇಬ್ರಿಯ 13:8).

### ಕಾಯಿನನ ಕಡೆಗೆ ಆತನ ಚಿಂತನೆ

ಹಿಂದಿನ ಸಮಯದ ಕಡೆಗೆ ಒಬ್ಬನು ನೋಡುವಾಗ, ವಿಶ್ವದ ಒಡೆತನವುಳ್ಳ ಒಬ್ಬ ಜೀವಿಯು, ಒಬ್ಬ ಮನುಷ್ಯನಿಗೆ, ಪಾಪಭರಿತ, ಉದ್ವಿಗ್ನನಾದ, ಜೋಲುಬಿದ್ದ ಹಾಗೂ ಕೋಪದಿಂದ ಇದ್ದ ಕಾಯಿನನ ಬಳಿಗೆ ಭೂಲೋಕಕ್ಕೆ ಅವನೊಂದಿಗೆ ಮಾತಾಡಲು ಬರುವದಕ್ಕೆ ಸಮಯ ತೆಗೆದು ಕೊಳ್ಳುವದನ್ನು ನೋಡುತ್ತಾನೆ. ಸರಿಯಾದದ್ದನ್ನು ಮಾಡಲು "ಒಳ್ಳೆಯದನ್ನು" ಮಾಡಲು ಕಾಯಿನನಿಗೆ ಅವಕಾಶವು ಕೊಡಲ್ಪಟ್ಟಿತ್ತು (ಆದಿಕಾಂಡ 4:7); ಆದರೆ ಅವನು ತಪ್ಪಾದದ್ದನ್ನು ಮಾಡುವದನ್ನು, ಒಳ್ಳೇದನ್ನು ಮಾಡದಿರುವದನ್ನು ಆಯ್ದುಕೊಂಡನು. ಎಲ್ಲಾ ವಿಧದಿಂದ, ಕಾರ್ಯತತ್ಪರನಾದ ಪರಲೋಕದ ದೇವರು ಪರಲೋಕದಲ್ಲಿಯೇ ಉಳಿದು ಕೊಳ್ಳಬಹುದಿತ್ತು, ಅವಿಧೇಯ ಕಾಯಿನನ್ನು ಕಡೆಗಣಿಸ ಬಹುದಿತ್ತು; ಆದರೆ ಪಾಪಭರಿತ ಪ್ರಾಣದ ಕಡೆಗೆ ಆತನ ಚಿಂತನೆಯು, ಒಬ್ಬ ವ್ಯಕಿಯೊಂದಿಗೆ ವೈಯಕ್ತಿಕ ಕಾರ್ಯ ಮಾಡಲು ದೇವರನ್ನು ಪರಲೋಕದಿಂದ ಕೆಳಗೆ ತಂದಿತು.

ಕಾಯಿನನ್ನು ರಕ್ಷಿಸಲು ದೇವರು ಪ್ರಯತ್ನಿಸಿದನು. ಮಾನವ ಜೀವಿಗೆ ಪಾಪದ ಮೇಲೆ ದೊರೆತನ ಮಾಡಲು ಮತ್ತು ಕರ್ತನಿಂದ ಸ್ವೀಕರಿಸಲ್ಪಡಲು ಸಾಧ್ಯತೆ ಇದೆಯೆಂದು ಅವನಿಗೆ ತೋರಿಸುವದರಿಂದ ಆತನು ಅವನೊಂದಿಗೆ ತರ್ಕಮಾಡಿದನು (ಆದಿಕಾಂಡ 4:7). ದೇವರ ಸಂಧಾನಕ್ಕೆ ಸರಿಯಾಗಿ ಪ್ರತಿಕ್ರಿಯೆ ತೋರಿಸುವಲ್ಲಿ ಕಾಯಿನನು ಸೋತುಹೋದದ್ದು ಯಾವ ರೀತಿಯಲ್ಲಿಯೂ ದೇವರ ಚಿಂತನೆಯನ್ನು ಕಡಿಮೆ ಮಾಡುವದಿಲ್ಲ. ಕಾಯಿನನು ಕೆಟ್ಟದ್ದನ್ನು ಮಾಡುವದನ್ನು ಆಯ್ದುಕೊಂಡದ್ದರ ಬಗ್ಗೆ ಒಳ್ಳೇ ಕರ್ತನಿಗೆ ನೋವಾಯಿತು.

### ನೋಹನ ಸಮಕಾಲಿನರ ಕಡೆಗೆ ಆತನ ಚಿಂತನೆ

ನೋಹನ ದಿನಗಳಲ್ಲಿ ಪುರುಷರು ಕಾಮಾಸಕ್ತಿಗೆ ಒಳಗಾಗಿ, "ತಮಗೆ

ಇಷ್ಟರಾದವರನ್ನು ಹೆಂಡತಿರನ್ನಾಗಿ ಆಯ್ದುಕೊಂಡಾಗ" (ಆದಿಕಾಂಡ 6:2), ಶುದ್ಧನೂ ಪ್ರೀತಿಸುವವನೂ ಆದ ದೇವರ ಮೇಲೆ ಆಳವಾದ ಪರಿಣಾಮ ಮಾಡಿತು. ಕರ್ತನು, "ಭೂಮಿಯ ಮೇಲೆ ಮನುಷ್ಯರನ್ನು ಉಂಟುಮಾಡಿದ್ದಕ್ಕಾಗಿ ದುಃಖಪಟ್ಟು, ತನ್ನ ಹೃದಯದಲ್ಲಿ ನೊಂದುಕೊಂಡನು" (ಆದಿಕಾಂಡ 6:6). ಒಂದು ತಪ್ಪಿನ ಕಾರಣದಿಂದ ಮನಸ್ಸು ಬದಲಾಯಿಸಿಕೊಳ್ಳುವ ಅರ್ಥದಲ್ಲಿ ಪಶ್ಚಾತ್ತಾಪ ಪಡುವುದು ದೇವರಿಗೆ ಅಸಾಧ್ಯವಾದದ್ದಾಗಿದೆ (1 ಸಮುವೇಲ 15:29). ಹೀಗಿದ್ದರೂ ಮಾನವನ ದುರ್ಮಾರ್ಗದ ಕಡೆಗೆ ನೋವಿನ ಮತ್ತು ದುಃಖ ಪಡುವಿಕೆಯ ಭಾವನೆಯ ಅರ್ಥದಲ್ಲಿ ದೇವರು ಪಶ್ಚಾತ್ತಾಪ ಪಟ್ಟನು (ಹಿಬ್ರೂ: *naham*; 1 ಸಮುವೇಲ 15:11, 35; ನ್ಯಾಯಸ್ಥಾಪಕರು 2:18; ಯೆರೆಮೀಯ 42:10) ಮತ್ತು ಪಶ್ಚಾತ್ತಾಪ ಪಡುತ್ತಲೇ ಇರುತ್ತಾನೆ (ಪ್ರಕಟನೆ 3:20).

ಮಾನವರ ಕಡೆಗೆ ದೇವರ ಮೃದುವಾದ ಪ್ರೀತಿಯು ಪಾಪವನ್ನು ಕಡೆಗಣಿಸುವಂತೆ ಇಲ್ಲವೇ ಶಿಕ್ಷೆಯನ್ನು ತಡೆಹಿಡಿಯುವಂತೆ ಆತನನ್ನು ಎಂದೂ ನಡಿಸಿರುವದಿಲ್ಲ. ನೋಹನ ಸಮಕಾಲೀನರು, ನೂರ ಇಪ್ಪತ್ತು ವರ್ಷಗಳವರೆಗೆ ನೋಹನ ಪ್ರಸಂಗದ ಮುಖಾಂತರ ದೇವರು ಅವರೊಂದಿಗೆ ಬೇಡಿಕೊಳ್ಳುವದನ್ನು ಕೇಳಿದನಂತರವೂ ದೇವರ ಕೋಪ ವನ್ನು ಅನುಭವಿಸಿದರು ಮತ್ತು ಮುಳುಗಿ ಹೋದರು. ಅವರ ನಾಶನವು ದೇವರ ಅಪೇಕ್ಷೆ ಯಾಗಿರಲಿಲ್ಲ; ಪಾಪಗಳು ತಮ್ಮನ್ನು ಶಿಕ್ಷಿಸುವಂತೆ ಆತನನ್ನು ಒತ್ತಾಯ ಪಡಿಸಿದರು.

## ಮೋವಾಬಿನ ಕಡೆಗೆ ಆತನ ಚಿಂತನೆ

ಲೋಟನ ವಂಶಜರು, ಮೋವಾಬ್ಯರು, ವ್ಯಭಿಚಾರ ಮಾಡಿದರು, ವಿಗ್ರಹಗಳಿಗೆ ಯಜ್ಞಗಳನ್ನು ಅರ್ಪಿಸಿದರು, ಆದರೂ ದೇವರು ಅವರನ್ನು ಪ್ರೀತಿ ಮಾಡಿದನು. ಅವರ ಬಗೆಗಿನ ಆತನ ಚಿಂತನೆಯು ಆಳವಾಗಿತ್ತು. "ನನ್ನ ಹೃದಯವು ಮೋವಾಬಿನ ನಿಮಿತ್ತವಾಗಿ ಮೊರೆಯಿಡುತ್ತದೆ" ಎಂದು ಉದ್ಗಾರವೆತ್ತಿದನು (ಯೆಶಾಯ 15:5). "ಮೋವಾಬಿನ ನಿಮಿತ್ತ ನನ್ನ ಹೃದಯವು, ಕೀರ್‌ಹೆರೆಸಿನ ನಿಮಿತ್ತ ನನ್ನ ಅಂತರಂಗವು, ಕಿನ್ನರಿಯಂತೆ ಅಲುಗಿ ನುಡಿಯುತ್ತದೆ" (ಯೆಶಾಯ 16:11). ಮೋವಾಬು ನೀತಿಯಿಂದ ದೂರ ಹೋದರೂ (ನೋಡಿರಿ ಅರಣ್ಯಕಾಂಡ 25:1-5), ಅದು ದೇವರ ಪರಾಮ್ಮರಿಸುವಿಕೆಯಿಂದ ಅಗಲಿಹೋಗುವುದು ಅಸಾಧ್ಯವಾಗಿತ್ತು).

## ನಿನೆವೆಯ ಕಡೆಗೆ ಆತನ ಚಿಂತನೆ

ಅಶ್ಶೂರ್ಯರು ನಿನೆವೆಯ ಮಹಾ ಪಟ್ಟಣದಲ್ಲಿ ವಾಸಿಸುತ್ತಿದ್ದವರು ಅದೇ ರೀತಿಯಲ್ಲಿ ನೀತಿಯಿಂದ ಅಗಲಿ ಹೋದರು ("ಅದರ ನಿವಾಸಿಗಳ ದುಷ್ಟತನವು ನನ್ನ ಸನ್ನಿಧಿಗೆ ಮುಟ್ಟಿದೆ" ಯೋನ 1:2) ದೇವರು, ಮೃದುವಾದ ಮತ್ತು ಆಸಕ್ತಿಯುಳ್ಳ ಹೃದಯದಿಂದ, ಬಿಟ್ಟು ಬಿಡದೆ ಮಾನವನ ಪುರೋವೃದ್ಧಿಗಾಗಿ ಬಯಸುತ್ತಾನೆ. ನಿನೆವೆಯಲ್ಲಿ ಜನರ ನಡತೆಯನ್ನು ಬದಲಾಯಿಸುವದಕ್ಕಾಗಿ ಶಕ್ತನಾದ ಆತ್ಮಗೆಲ್ಲುವವನನ್ನು ಆತನು ಕಳುಹಿಸಿದನು. ಅಂತಿಮ ವಾಗಿ ಯೋನನು ಅಲ್ಲಿಗೆ ಹೋದಾಗ ಅತ್ಯುತ್ತಮವಾದ ಕಾರ್ಯಮಾಡಿದನು, ಮತ್ತು ಇಡೀ ಪಟ್ಟಣವು ಮಾನಸಾಂತರಕ್ಕೆ ತಿರುಗಿ ಕೊಂಡಾಗ ದೇವರ ಹೃದಯವು ಆನಂದಿಸಿತು.

ಯೋನನಲ್ಲಿಯೇ ತಪ್ಪಿಹೋದವರ ಕಡೆಗೆ ಸರಿಯಾದ ಮನೋಭಾವನೆಯಿರಲಿಲ್ಲ. ತಪ್ಪಿಹೋದ ಜನರ ಕಡೆಗೆ ದೇವರಿಗಿದ್ದ ಪ್ರೀತಿಯ ಚಿಂತನೆಯು ಅವನಿಗಿರಲಿಲ್ಲ. ನಾಶವಾಗಿ ಹೋಗುತ್ತಿರುವ ಜನರ ಕಡೆಗೆ, "ಎಡಗೈ ಬಲಗೈ ತಿಳಿಯದ" ಚಿಕ್ಕವರಿಗಾಗಿ

(ಯೋನ 4:11) ಚಿಂತನೆ ಮಾಡಬೇಕೆಂಬುದನ್ನು ಅವನಿಗೆ ತೋರಿಸಲು ದೇವರು ಪ್ರಯತ್ನಿಸಿದನು.

## ಅವಿಧೇಯರಾದ ಇಸ್ರಾಯೇಲ್ಯರ ಕಡೆಗೆ ಆತನ ಚಿಂತನೆ

ಅಬ್ರಹಾಮನ ವಂಶಜರು ಐಗುಪ್ತದಲ್ಲಿ ಬಿಟ್ಟೀ ಕೆಲಸ ಮಾಡಿಸುತ್ತಿರುವವರ ಕೆಳಗೆ ಬಹು ಕಠಿಣವಾದ ಗುಲಾಮಗಿರಿಯಲ್ಲಿ ಇದ್ದದ್ದು ಪರಲೋಕದ ದೇವರಿಗೆ ನೋವನ್ನುಂಟು ಮಾಡಿತು. ಆತನು ಹೀಗೆ ಹೇಳಿದನು,

> ಐಗುಪ್ತ ದೇಶದಲ್ಲಿರುವ ನನ್ನ ಜನರ ದುರವಸ್ಥೆಯನ್ನು ನೋಡೇ ನೋಡಿದ್ದೇನೆ. ಬಿಟ್ಟೀ ಮಾಡಿಸುವವರ ವಿಷಯದಲ್ಲಿ ಅವರು ಇಟ್ಟ ಮೊರೆಯು ನನಗೆ ಕೇಳಿಸಿತು; ಅವರ ದುಃಖವನ್ನೆಲ್ಲಾ ನಾನು ಬಲ್ಲೆನು (ವಿಮೋಚನಕಾಂಡ 3:7).

ಆತನು ಅವರನ್ನು ವಿಮೋಚನೆ ಮಾಡಿದನು ಮತ್ತು ಅನಂತರ ಅದರ ಬಗ್ಗೆ ಹೇಳಲು ಆನಂದಪಟ್ಟನು:

> ಇಸ್ರಾಯೇಲು ಕೇವಲ ಬಾಲ್ಯದಲ್ಲಿದ್ದಾಗ ನಾನು ಅದರ ಮೇಲೆ ಪ್ರೀತಿಯಿಟ್ಟು ಆ ನನ್ನ ಮಗನನ್ನು ಐಗುಪ್ತ ದೇಶದಿಂದ ಕರೆದೆನು ... ನಾನು ನನ್ನ ಜನರನ್ನು ಮಾನವರಿಗೆ ತಕ್ಕ ಮೂಗುದಾರದಿಂದ, ಅಂದರೆ ಮಮತೆಯ ಹಗ್ಗದಿಂದ ಸೆಳೆದುಕೊಂಡೆನು; ನೊಗವನ್ನು ತಲೆಯ ಈಚೆಗೆ ತೆಗೆಯುವವರಂತೆ ನಾನು ಅವರನ್ನು ಸುಧಾರಿಸಿ ಅವರಿಗೆ ತಿನಿಯನ್ನು ನಯದಿಂದ ಇಕ್ಕಿದೆನು (ಹೋಶೇಯ 11:1, 4).

ಆತನ ಬೆಚ್ಚಗಿನ ಹೃದಯವು ಇಸ್ರಾಯೇಲ್ಯರು ತನ್ನ ದಯೆಗಳನ್ನು ಮೆಚ್ಚಿಕೊಳ್ಳುವದಿಲ್ಲ ಎಂಬುದನ್ನು ಮುನ್ನೋಡಿತು, ಮತ್ತು ಈ ಸಂಗತಿಯು ದೇವರ ಮೇಲೆ ಆಳವಾದ ಪರಿಣಾಮ ಮಾಡಿತು:

> "ಆ ಮಾತುಗಳೆಲ್ಲಾ ಒಳ್ಳೆಯವೇ, ನನ್ನಲ್ಲಿ ಭಯಭಕ್ತಿಯುಳ್ಳವರಾಗಿ ನನ್ನ ಆಜ್ಞೆಗಳನ್ನು ಅನುಸರಿಸುವ ಮನಸ್ಸು ಯಾವಾಗಲೂ ಅವರಲ್ಲಿ ಇದ್ದರೆ ಎಷ್ಟೋ ಮೇಲು; ಆಗ ಅವರಿಗೂ ಅವರ ಸಂತತಿಯವರಿಗೂ ಯಾವಾಗಲೂ ಶುಭವುಂಟಾಗುವದು" (ಧರ್ಮೋಪದೇಶಕಾಂಡ 5:29).

ಅವರು ಸೈತಾನನ ಸೇವೆಮಾಡಿ, ಅಪರಾಧದಲ್ಲಿ ಜೀವಿಸಿದಾಗ, ದೇವರು ಇನ್ನೂ ಚಿಂತಿಸಿದನು. ಆತನು ಅವರೊಂದಿಗೆ ಬೇಡಿಕೊಂಡನು:

> "ನನ್ನ ಜೀವದಾಣೆ," ದುಷ್ಟನ ಸಾವಿನಲ್ಲಿ ನನಗೆ ಲೇಶವಾದರೂ ಸಂತೋಷವಿಲ್ಲ; ಅವನು ತನ್ನ ದುರ್ಮಾರ್ಗವನ್ನು ಬಿಟ್ಟು ಬಾಳುವದೇ ನನಗೆ ಸಂತೋಷ. ಇಸ್ರಾಯೇಲ್ ವಂಶದವರೇ, ನಿಮ್ಮ ದುರ್ಮಾರ್ಗಗಳನ್ನು ಬಿಡಿರಿ, ಬಿಟ್ಟು ಬಿಡಿರಿ: ನೀವು ಸಾಯಲೇಕೆ? ಇದು ಕರ್ತನಾದ ಯೆಹೋವನ ನುಡಿ" (ಯೆಹೆಜ್ಕೇಲ 33:11).

ಪರಲೋಕದ ತಂದೆಯು ಸೈತಾನನೊಂದಿಗೆ ರಾಜಿ ಮಾಡಿಕೊಳ್ಳಲಿಲ್ಲ.

ಪುನಃ ಪುನಃ ಆತನು ತನ್ನ ಮಕ್ಕಳನ್ನು ಗದರಿಸಬೇಕಾಗಿತ್ತು; ಆದರೆ ಅದು ಅವರಿಗೆ ಮಾಡಿದಕ್ಕಿಂತಲೂ ಎಷ್ಟೋ ಹೆಚ್ಚಾಗಿ ನೋವನ್ನುಂಟುಮಾಡಿತು:

> "ಎಫ್ರಾಯೀಮು ನನಗೆ ಪ್ರಿಯಪುತ್ರನೋ, ಮುದ್ದುಮಗುವೋ, ಏನೋ? ಅವನ ಹೆಸರೆತ್ತಿದಾಗೆಲ್ಲಾ ಅವನನ್ನು ಜ್ಞಾಪಿಸಿಕೊಳ್ಳುತ್ತಲೇ ಬರುತ್ತೇನೆ. ಇದರಿಂದ ನನ್ನ ಕರುಳು ಅವನಿಗಾಗಿ ಮರುಗುತ್ತದಲ್ಲಾ; ಅವನನ್ನು ಕರುಣಿಸೇ ಕರುಣಿಸುವೆನು" ಎಂದು ಕರ್ತನು ಹೇಳುತ್ತಾನೆ (ಯೆರೆಮೀಯ 31:20).

ದೇವರ ಆಳವಾದ ಪ್ರೀತಿಯು ತಾಯಿಯ ಪ್ರೀತಿಗಿಂತ ಎಷ್ಟೋ ಹೆಚ್ಚಾಗಿರುವುದು:

> "ಒಬ್ಬ ಹೆಂಗಸು ತಾನು ಹೆತ್ತ ಮಗುವಿನ ಮೇಲೆ ಕರುಣೆಯಿಡದೆ ತನ್ನ ಮೊಲೆಕೂಸನ್ನು ಮರೆತಾಳೇ? ಒಂದು ವೇಳೆ ಮರೆತಾಳು, ನಾನಾದರೆ ನಿನ್ನನ್ನು ಮರೆಯೆ. ಇಗೋ ನನ್ನ ಅಂಗೈಗಳಲ್ಲಿ ನಿನ್ನನ್ನು ಚಿತ್ರಿಸಿದ್ದೇನೆ. ನಿನ್ನ ಪೌಳಿಗೋಡೆಗಳು ಸದಾ ನನ್ನ ಕಣ್ಣೆದುರಿನಲ್ಲಿವೆ" (ಯೆಶಾಯ 49:15, 16).

ಅವಿಧೇಯರಾದ ಇಸ್ರಾಯೇಲ್ಯರನ್ನು ಆತನು ಶಿಕ್ಷಿಸುವಾಗ ಅದು ಆತನಿಗೆ ಸಂತೋಷಕರವಾದದ್ದಾಗಿರಲಿಲ್ಲ. "ಅವರು ಶ್ರಮೆಪಡುತ್ತಿರುವಾಗೆಲ್ಲಾ ಆತನೂ ಶ್ರಮೆಪಟ್ಟನು" (ಯೆಶಾಯ 63:9ಎ). ಅವರ ತಪ್ಪು ಕಾರ್ಯಗಳಿಗಾಗಿ ಆತನು ದುಃಖಿಸಿದನು; ಆದರೆ ಆತನು ಶುದ್ಧತೆಯಲ್ಲಿ, ಆತನು ಅವರನ್ನು ಶ್ರಮೆಗೆ ಒಪ್ಪಿಸಬೇಕಾಗಿತ್ತು: "ಅವರಾದರೋ ಎದುರುಬಿದ್ದು ಆತನ ಪರಿಶುದ್ಧಾತ್ಮನನ್ನು ದುಃಖಪಡಿಸಿದರು; ಆದದರಿಂದ ಆತನು ಮಾರ್ಪಟ್ಟು ಅವರಿಗೆ ಶತ್ರುವಾಗಿ ತಾನೇ ಅವರೊಡನೆ ಹೋರಾಡಿದನು" (ಯೆಶಾಯ 63:10).

ಪ್ರಾರಂಭದಿಂದ ಅಂತ್ಯವನ್ನು ನೋಡಬಲ್ಲಾತನು ತನ್ನ ಜನರಲ್ಲಿ ಕೆಲವರು ಮಾನಸಾಂತರ ಪಡುವರು ಎಂದು ತಿಳಿದಿದ್ದನು ಮತ್ತು ತನ್ನ ಮಹಾ ಪ್ರೀತಿಯಲ್ಲಿ ಕ್ರೈಸ್ತತ್ವಕ್ಕಾಗಿ ನೀಲನಕ್ಷೆಯನ್ನು ರಚಿಸಿದನು. ಕ್ರೈಸ್ತರಾಗಿರುವ ಉನ್ನತ ಸ್ಥಿತಿಯು, ರಾಜ್ಯದಲ್ಲಿ ಇರುವವದರ ಆಶೀರ್ವಾದವು, ಕಣ್ಣು ನೋಡಲಿಲ್ಲ ಇಲ್ಲವೇ ಕಿವಿಯು ಕೇಳಿಸಿಕೊಂಡಿರಲಿಲ್ಲ: "ನಿನ್ನನ್ನು ಬಿಟ್ಟರೆ ನಿರೀಕ್ಷಿಸುವವನಿಗೆ ಕಾರ್ಯಕರ್ತನಾದ ಯಾವ ದೇವರನ್ನೂ ಆದಿಯಿಂದ ಯಾರೂ ಕೇಳಲಿಲ್ಲ, ಯಾರ ಕಿವಿಗೂ ಬೀಳಲಿಲ್ಲ, ಯಾರ ಕಣ್ಣಿಗೂ ಕಾಣಲಿಲ್ಲ" (ಯೆಶಾಯ 64:4). ಆತನು ವಾಗ್ದಾನ ಮಾಡಿದ ರಾಜ್ಯದಲ್ಲಿ ತಪ್ಪಿಹೋದವರಿಗಾಗಿ ದೇವರ ಚಿಂತನೆಯು ಅಂತಿಮಸ್ಥಿತಿ ತಲುಪುವುದು.

## ಇಂದು ಪಾಪಗಳ ಕಡೆಗೆ ಆತನ ಚಿಂತನೆ

ತಂದೆಯ ಪ್ರೀತಿಯು ಮೋವಾಬ್ಯರ, ನಿನೆವೆಯವರ, ಮತ್ತು ಇಸ್ರಾಯೇಲ್ಯರ ಕಡೆಗೆ ವಿಸ್ತರಿಸಿದ್ದು ಮಾತ್ರವಲ್ಲದೇ, ಎಲ್ಲಾ ಜನಾಂಗಗಳಿಗೂ ವಿಸ್ತರಿಸಿತ್ತು. ದೇವರು ಪಕ್ಷಪಾತಿಯಲ್ಲ, ಆತನ ಕುಮಾರನು ಇಡೀ ಲೋಕದ ಪಾಪಗಳನ್ನು ನಿವಾರಣೆ ಮಾಡುವ ಯಜ್ಞವಾಗಿರಲು ಕಳುಹಿಸಲ್ಪಟ್ಟನು (1 ಯೋಹಾನ 2:2). ಒಬ್ಬರಾದರೂ ತಪ್ಪಿಹೋಗಬಾರದು ಎಂಬುದು ಆತನ ನಿತ್ಯಚಿಂತನೆ ಆಗಿದೆ.

2 ಪೇತ್ರ 3:9ರಲ್ಲಿ ಹೀಗೆ ಓದುತ್ತೇವೆ: "ಕರ್ತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ತಡ ಮಾಡುತ್ತಾನೆಂಬುದಾಗಿ ಕೆಲವರು ಅರ್ಥಮಾಡಿಕೊಳ್ಳುವ ಪ್ರಕಾರ

ಆತನು ತಡಮಾಡುವವನಲ್ಲ. ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟ ಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದು ನಿಮ್ಮ ವಿಷಯದಲ್ಲಿ ದೀರ್ಘಶಾಂತಿಯುಳ್ಳವನಾಗಿದ್ದಾನೆ." ಪ್ರತಿಯೊಬ್ಬ ಪಾಪಿಯು, ಈ ಸತ್ಯಗಳನ್ನು ಅರಿತುಕೊಂಡು, ಆತನಿಗೆ ಪ್ರೀತಿಯಿಂದ ಉತ್ತರ ಕೊಡತಕ್ಕದ್ದು, ಯಾಕಂದರೆ ದೇವರು ನಮ್ಮನ್ನು ಮೊದಲು ಪ್ರೀತಿ ಮಾಡಿದ್ದಾನೆ (1 ಯೋಹಾನ 4:19).

© 2009 Truth for Today